**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 02-07-2026.**

**ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ಶ್ರೀ. ಕೆ ಬಿ ಜಿ ವಕೀಲರಿಂದಃ**

5. ನಾವು ಅಬ್ದುಲ ಖಾದರ ಇವರಿಗೆ ನಾಲ್ಕು ಜನ ಮಕ್ಕಳು. ಈ ದಾವೆಯಲ್ಲಿ ಎಲ್ಲರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಗೌಸಲಾಲ ಇವರು ನನ್ನ ಸ್ವಂತ ಸಹೋದರರು ಎಂದರೆ ಸರಿ. ಅಬ್ದುಲ ಗಣಿ ಕತಾಲಸಾಬ ಪಾಟೀಲ ಇವರು ಪ್ರತಿವಾದಿ ನಂ.1 ಜೈಗುನಿಸಾ ಇವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ ಖರೀದಿ ಪತ್ರಕ್ಕೆ ಸಾಕ್ಷಿದಾರರಾಗಿ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಸದರಿ ದಾಖಲೆಯನ್ನು ನೋಡಿ ಒಪ್ಪಿ ಕೊಂಡಿದ್ದರಿಂದ ನಿಡಿ.1 ಎಂದು ಗುರುತಿಸಲಾಯಿತು. ಅಬ್ದುಲ ಗಣಿ ಕತಾಲಸಾಬ ಪಾಟೀಲ ಇವರು ಪ್ರತಿವಾದಿ ನಂ.1 ಜೈಗುನಿಸಾ ಇವರಿಗೆ ಸರ್ವೆ ನಂ.124 ರಲ್ಲಿ 3 ಎಕರೆ ಜಮೀನನ್ನು ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದರು ಎಂದರೆ ಸರಿ. ಸದರಿ ಖರೀದಿ ಪತ್ರದ ಪ್ರಕಾರ ಪ್ರತಿವಾದಿ ನಂ.1 ರವರ ಹೆಸರು ದಾಖಲೆಯಲ್ಲಿ ಸೇರಿಸಲಾಗಿದೆ ಎಂದರೆ ಸರಿ. ಸದರಿ ಖರೀದಿ ಪತ್ರ ಆದ 10 ವರ್ಷಗಳ ನಂತರ ಪ್ರತಿವಾದಿ ನಂ.1 ರವರು ಪ್ರತಿವಾದಿ ನಂ.2 ರವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ.1 ಜೈಗುನಿಸಾ ಇವರ ಹೆಸರಿನಲ್ಲಿ ಸರ್ವೆ ನಂ.124/2 ಕ್ಷೇತ್ರ 29 ಗುಂಟೆ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನನ್ನು ದಿನಾಂಕಃ 22-06-2022 ರಂದು ಜಗನ್ನಾಥ ಕುಲಕರ್ಣಿ ಎನ್ನುವರಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ ಬಗ್ಗೆ ನಾನು ತಕರಾರು ಮಾಡಿಲ್ಲ ಏಕೆಂದರೆ ಆ ವಿಷಯ ನನಗೆ ಗೊತ್ತಿಲ್ಲ.

6. ಸರ್ವೆ ನಂ.124/2, ಸರ್ವೆ ನಂ. 124/3 ಈ ಜಮೀನುಗಳು ಯಾರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿಯು ನಾಲ್ಕು ಜನರ ಜಂಟಿ ಹೆಸರಿನಲ್ಲಿ ಇವೆ ಎನ್ನುತ್ತಾರೆ. ಅವರುಗಳು ಯಾರೆಂದರೆ ಗೌಸಲಾಲ ಪಾಟೀಲ, ಅಬ್ದುಲ ಖರೀಮ ಪಾಟೀಲ, ರಿಯಾಜಅಹ್ಮದ ಪಾಟೀಲ ಮತ್ತು ಬಶೀರಅಹ್ಮದ ಪಾಟೀಲ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರ ಮಾಡಿದ್ದೇನೆ. ನಿಪಿ.2 ಮತ್ತು 3 ಪಹಣಿ ಪತ್ರಿಕೆಗಳಲ್ಲಿ ನಾನು ಹೇಳಿದಂತೆ ನಾಲ್ಕು ಜನರ ಜಂಟಿ ಹೆಸರಿನಲ್ಲಿ ಇರುವುದಿಲ್ಲ ಎಂದರೆ

ಸರಿಯಲ್ಲ ಸಾಕ್ಷಿ ಮುಂದುವರೆದು ನಿಪಿ.2 ಮತ್ತು 3 ದಾಖಲೆಗಳು ಸುಳ್ಳು ಇರುತ್ತವೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನನಗೆ ಮೋಸ ಆಗಿರುತ್ತದೆ ಎನ್ನುತ್ತಾರೆ. ಹಳೆ ಪಹಣಿ ಪತ್ರಿಕೆಗಳನ್ನು ಹಾಜರಪಡಿಸಿರುತ್ತಿರಿ ಆದರೆ ಹೊಸ ಪಹಣಿ ಪತ್ರಿಕೆಗಳನ್ನು ಹಾಜರ ಮಾಡಿಲ್ಲ ಎಂದರೆ ಸರಿ. ಈಗ ಸಾಕ್ಷಿಗೆ ಎರಡು ಪಹಣಿ ಪತ್ರಿಕೆಗಳನ್ನು ತೋರಿಸಿದ್ದು, ಅವುಗಳನ್ನು ಗುರುತು ಮಾಡಲು ಸಾಕ್ಷಿ ನಿರಾಕರಿಸಿರುತ್ತಾರೆ. ಸರ್ವೆ ನಂ.124/2 ಇದನ್ನು ಜಗನ್ನಾಥ ಕುಲಕರ್ಣಿ ಮತ್ತು 124/3 ಇದನ್ನು ಪ್ರತಿವಾದಿ ನಂ.2 ರವರು ಖರೀದಿ ಮಾಡಿದ್ದು ಅವರುಗಳ ಹೆಸರು ಪಹಣಿ ಪತ್ರಿಕೆಗಳಲ್ಲಿ ದಾಖಲಾಗಿದೆ ಎಂದರೆ ಸಾಕ್ಷಿಯು ಅದು ಮೋಸ ಆಗಿ ಅವರ ಹೆಸರಿನಲ್ಲಿ ದಾಖಲಾಗಿದೆ ಎಂದು ಹೇಳುತ್ತಾರೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

7. ಈ ಹಿಂದೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ನಡುವೆ ಆಸ್ತಿಗಳು ಬೇರೆ ಬೇರೆ ಆಗಿವೆ ಎಂದರೆ ಸರಿ. ಅಬ್ದುಲ ಗಣಿ ಖತಾರಸಾಬ ಇವರು ಮಾರಾಟ ಮಾಡಿದ ನಂತರ ಸದರಿ ಸರ್ವೆ ನಂಬರ 124/2 ಮತ್ತು 124/3 ಅಂತಾ ಬೇರೆ ಬೇರೆ ಪೊಡಿಯಾಗಿರುತ್ತವೆ ಎಂದರೆ ಸರಿಯಲ್ಲ. ನಿಪಿ.1 ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ.124/4 ಅಂತಾ ಇದೆ ಎಂದರೆ ಸಾಕ್ಷಿಯು ಆ ರೀತಿ ಭಾಗ ಆಗಿಲ್ಲ ಎನ್ನುತ್ತಾರೆ. ನಿಪಿ.1 ದಾಖಲೆಯು ನಿಜ ದಾಖಲೆ. ಅಬ್ದುಲ ಗಣಿ ಖತಾರಸಾಬ ಪಾಟೀಲ ಇವರು ಪ್ರತಿವಾದಿ ನಂ.1 ಇವರಿಗೆ ಮಾರಾಟ ಆಗುವ ಸಮಯದಲ್ಲಿ 11ಎ ಸ್ಕೆಚ್ ಮಾಡಲಾಗಿತ್ತು ಎಂದರೆ ಸರಿಯಲ್ಲ. ಕಾನೂನಬದ್ಧವಾಗಿ ಮಾರಾಟ ಮಾಡಿದ್ದರು ಮತ್ತು ಸದರಿ ಖರೀದಿ ಪತ್ರಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದರು ಕೂಡಾ 11ಎ ಸ್ಕೆಚ್ ಆಗಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅದಕ್ಕೆ ತನ್ನದೆ ಆದ ಪ್ರತ್ಯೇಕ ಚಕಬಂದಿ ಇದ್ದು ಮತ್ತು ಪ್ರತ್ಯೇಕ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ.

8. ಅಬ್ದುಲ ಗಣಿ ಖತಲಸಾಬ ಪಾಟೀಲ ಇವರು ಪ್ರತಿವಾದಿ ನಂ.1 ಜೈಗುನ್ನಿಸಾ ಇವರಿಗೆ ದಾವಾ ಆಸ್ತಿ ನಂ.124/3 ಮತ್ತು ಇನ್ನೊಂದು ಆಸ್ತಿ 124/2 ನೇದ್ದನ್ನು ಮಾರಾಟ ಮಾಡುವಾಗ ನಾವೇ

ಸದರಿ ಆಸ್ತಿಯನ್ನು ಖರೀದಿ ಮಾಡುತ್ತೇವೆ ಅಂತಾ ನನ್ನ ಚಿಕ್ಕಪ್ಪ –ಅಬ್ದುಲ ಗಣಿ ಖತಲಸಾಬ ಪಾಟೀಲ ಇವನಿಗೆ ನಾವು ಕೇಳಿಲ್ಲ ಮತ್ತು ತಕರಾರು ಮಾಡಿಲ್ಲ. ಜೈಗುನಿಸಾ ಇವರು ಖರೀದಿ ಮಾಡಿ ನಂತರ ಹಲವಾರು ವರ್ಷಗಳ ನಂತರ ಪ್ರತಿವಾದಿ ನಂ.2 ಇವರಿಗೆ ಖರೀದಿ ಕೊಟ್ಟ ನಂತರ ತಕರಾರು ಮಾಡುತ್ತಿದ್ದೆವೆ ಎಂದರೆ ನಾವು ನಾಲ್ಕು ಜನ ದುಡ್ಡು ಜಮಾ ಮಾಡಿ ನಾಲ್ಕು ಜನ ಹೆಸರಿನಲ್ಲಿ ಜಂಟಿ ಮಾಡುವ ಸಂಬಂಧ ನಮಗೆ ಮೋಸ ಆಗಿರುತ್ತದೆ ಎನ್ನುತ್ತಾರೆ. ಆ ರೀತಿ ನಮ್ಮ ವಾದ ಪತ್ರದಲ್ಲಿ ನಮ್ಮ ವಕೀಲರಿಗೆ ಹೇಳಿ ಬರೆಸಿಲ್ಲ. ಸಾಕ್ಷಿ ಮುಂದುವರೆದು ಮೊದಲು ಮಾರಿದ ವಿಷಯ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ನಂ.1 ರವರು ಮೋಸ ಮಾಡಿದ ಬಗ್ಗೆ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎನ್ನುತ್ತಾರೆ. ಪ್ರತಿವಾದಿ ನಂ.1 ಇವರು ಪ್ರತಿವಾದಿ ನಂ.2 ಇವರಿಗೆ ರೂ.6,88,000/- ಗಳಿಗೆ ದಿನಾಂಕಃ 02-09-2020 ರಂದು ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಖರೀದಿ ಗೊತ್ತಾದ ನಂತರ ನಾನು ದಾವೆ ಮಾಡಿರುತ್ತೇನೆ. ಪ್ರತಿವಾದಿ ನಂ.2 ರವರು ಖರೀದಿ ಮಾಡಿಕೊಂಡಾಗಿನಿಂದಲೂ ಇವತ್ತಿನವರೆಗೂ ಅವರು ಖರೀದಿ ಮಾಡಿದ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ರವರೆ ತಾವು ಖರೀದಿ ಮಾಡಿದ ದಾವಾ ಆಸ್ತಿಯ ಸ್ವಾ ಧೀನದಲ್ಲಿ ಇಲ್ಲ ಅಂತಾ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡಿದಾಗಿನಿಂದ ಪ್ರತಿವಾದಿ ನಂ.2 ರವರು ಸ್ವಾ ಧೀನದಲ್ಲಿ ಇದ್ದರು ಕೂಡಾ ನಾವು ವಾದಿಯರು ಮತ್ತು ಪ್ರತಿವಾದಿ ನಂ.1 ಮಿಲಾಪಿಯಾಗಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೆವೆ ಎಂದರೆ ಸರಿಯಲ್ಲ.

9. ಸಾಮಾನ್ಯವಾಗಿ ಯಾವುದೇ ವ್ಯವಹಾರ ನಾಲ್ಕು ಜನರಿಗೆ ಕೇಳಿ ತಿಳಿದುಕೊಂಡು ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ವ್ಯವಹಾರ ಗಪ್–ಚುಪ್ ಆಗಿರುತ್ತದೆ ಎನ್ನುತ್ತಾರೆ. ಪ್ರತಿವಾದಿ ನಂ.1 ಇವರು ಪ್ರತಿವಾದಿ ನಂ.2 ಇವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವಾಗ ನಾಲ್ಕು ಜನ ಹಿರಿಯರ ಸಮಕ್ಷಮದಲ್ಲಿ ಮಾತುಕತೆ ಮಾಡಿ ಅಂದಿನ ಮಾರುಕಟೆ ಬೆಲೆ ಪ್ರಕಾರ ಒಪ್ಪಿ ಕೊಂಡು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವ್ಯವಹಾರ ನಮ್ಮ ಎಲ್ಲಾ ಸಹೋದರಿಗು ಕೂಡಾ ಗೊತ್ತಿದ್ದರು ಗೊತ್ತಿಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಈಗ ನಮ್ಮ ಊರಿನ ಆಸ್ತಿಗಳ ಬೆಲೆ ಜಾಸ್ತಿ ಆಗಿರುತ್ತವೆ ಎಂದರೆ ಸರಿ. ಪ್ರತಿವಾದಿ ನಂ.2 ರವರಿಗೆ ಇನ್ನು ಸ್ವಲ್ಪ ಹೆಚ್ಚಿನ ಹಣ ಪಡೆಯುವ ಸಲುವಾಗಿ ನಾವು ಮತ್ತು ಪ್ರತಿವಾದಿ ನಂ.1 ಇವರು ಸೇರಿಕೊಂಡು ಈ ಸುಳ್ಳು ದಾವೆ ಸಲ್ಲಿಸಿದ್ದೆವೆ ಎಂದರೆ ಸರಿಯಲ್ಲ. ಅದಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೆವೆ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಗಾಗಿ ವಕೀಲರು ಸಮಯಾವಕಾಶ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**